ಶ್ರೀ ಜೆ.ಹೆಚ್. ಪಟೇಲ್ : ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ತಾವು ಇಷ್ಟು ಅವಸರ ಮಾಡಿದರೆ ಹೇಗೆ?

ಶ್ರೀ ಪಿ.ಜಿ.ಆರ್ ಸಿಂಧ್ಯಾ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ಸದನದ ಮುಂದೆ ಇಡುವುದಕ್ಕೆ ಬಯಸುತ್ತೇನೆ.

"ಇಂದು ಎಂದರೆ ದಿ: 13.9.95ರಂದು ಬೆಳಿಗ್ಗೆ 10.10ಕ್ಕೆ ಶ್ರೀ ವಾಸುದೇವನ್ ಅವರು ಬೆಂಗಳೂರು ನಗರದ ಪೊಲೀಸ್ ಕಮಿಷನರ್ ಶ್ರೀ ಶ್ರೀನಿವಾಸಲು ಅವರ ಮುಂದೆ ಹಾಜರಾಗಿರುತ್ತಾರೆ. ಪೊಲೀಸ್ ಕಮೀಷನರ್ ಶ್ರೀ ಶ್ರೀನಿವಾಸಲು ಅವರು ಸುಪ್ರೀಂ ಕೋರ್ಟ್, ಸಿವಿಲ್ ಅಪೀಲ್ ನಂ. 797, 1993 ಆರ್ಡರ್ ಪ್ರಕಾರವಾಗಿ ಶ್ರೀ ವಾಸುದೇವನ್ ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಬೆಳಿಗ್ಗೆ 10.30ಕ್ಕೆ ಕಳುಹಿಸಿದ್ದಾರೆ. ಶ್ರೀ ವಾಸುದೇವನ್ ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಇಡಲಾಗಿದೆ"

(ಈ ಹಂತದಲ್ಲಿ ಮಾನ್ಯ ಸದಸ್ಯರೊಬ್ಬರು ಶೇಮ್, ಶೇಮ್ ಎಂದು ಹೇಳಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಒಂದು ವಿಶೇಷವಾದಂತಹ, ವಿಚಿತ್ರವಾದಂತಹ ಸಂದರ್ಭದಲ್ಲಿ ನಾವು ಇಲ್ಲಿ ಇದ್ದೇವೆ. ಯಾವ ಒಂದು ಅಕ್ಷಮ್ಯ ಅಪರಾಧವನ್ನು ಈ ಸರ್ಕಾರ ಮಾಡಿ, ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂತಹ ಘಟನೆ ಏನು ನಡೆದಿದೆ, ಇದು ಇಡೀ ರಾಜ್ಯದ ಜನತೆ ತಲೆತಗ್ಗಿಸುವಂತಹ ಘಟನೆ. ಇಂತಹ ಉಸಿರು ಕಟ್ಟುವಂತಹ ವಾತಾವರಣದಲ್ಲಿ ಯಾವುದೇ ಪ್ರಾಮಾಣಿಕ ಅಧಿಕಾರಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಇದು ಉದ್ದೇಶಪೂರ್ವಕವಾಗಿ ಮುಖ್ಯಮಂತ್ರಿಗಳು ತಮಗೆ ಬೇಕಾದಂತಹ ವ್ಯಕ್ತಿಗೆ ಪ್ರಮೋಷನ್ ಕೊಡಿಸುವಂತಹ ಕಾರಣಕ್ಕೋಸ್ಕರ ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂತಹ ಒಂದು ಸಂದರ್ಭ ಬಂದಿದೆ. ಅದಕ್ಕಾಗಿ ಸರ್ಕಾರ ರಾಜೀನಾಮೆ ಕೊಡಬೇಕು ಎಂದು ಒತ್ತಾಯ ಮಾಡುತ್ತಾ, ಈ ಸರ್ಕಾರ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಹಕ್ಕಿಲ್ಲ ಎಂದು ಹೇಳಿ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಯಡಿಯೂರಪ್ಪನವರು ಮಾಡಿರತಕ್ಕಂಥ ಆರೋಪ ಏನಿದೆ ಅದರಲ್ಲಿ ಸತ್ಯ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಸಂಬಂಧಿಕರನ್ನು ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಮಾಡಿರತಕ್ಕಂಥ ಕ್ರಮ ಅಲ್ಲ. ಹಿಂದೆ ಮೂರು ನಾಲ್ಕು ವರ್ಷಗಳಿಂದ ಹೈಕೋರ್ಟ್‌ನಲ್ಲಿ, ಸುಪ್ರೀಂಕೋರ್ಟ್‌ನಲ್ಲಿ.... Mr. Speaker Sir, Government should clarify. You have to give this opportunity.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಳೆದ ಎರಡು ಮೂರು ವರ್ಷಗಳಲ್ಲಿ ವಿವಿಧ ನ್ಯಾಯಾಲಯಗಳಲ್ಲಿ ಆಗಿರತಕ್ಕಂಥ ತೀರ್ಪಿನ ಪ್ರಕಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಆಗಿರತಕ್ಕಂಥ ಆದೇಶದ ಪ್ರಕಾರವಾಗಿ ಇವತ್ತಿನ ದಿವಸ ಸರ್ಕಾರ ಸುಪ್ರೀಂ ಕೋರ್ಟ್‌ನ ಆಜ್ಞೆಗೆ ತಲೆಬಾಗಿದೆ. ಸನ್ಯಾಸ್ಯ ದೇವೇಗೌಡರು ಯಾವುದೇ ಅವರ ಸಂಬಂಧಿಕರನ್ನು ಸಹಾಯ ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿಲ್ಲ. ಅವರಿಗೆ